<u>**ಕರ್ನಾಟಕ ಸರ್ಕಾರ**</u>

ಸಂಖ್ಯೆ:ಗ್ರಾಅಪ 86 ಉಖಾಯೋ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:27.03.2020

<u>**ಸುತ್ತೋಲೆ**</u>

**ವಿಷಯ:** ಕೋವಿಡ್–19 (ಕೊರೊನಾ ವೈರಸ್) ವ್ಯಾಪಕವಾಗಿ ಹರಡದಂತೆ ಗ್ರಾಮ ಪಂಚಾಯತಿ ಹಾಗೂ ಗ್ರಾಮ ಮಟ್ಟದ ಕಾರ್ಯಪಡೆ ರಚಿಸುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಸುತ್ತೋಲೆ ಸಂ. ಗ್ರಾಅಪ 73 ಗ್ರಾಪಂಕಾ 2020, ದಿನಾಂಕ 06.03.2020, 21.03.2020 ಮತ್ತು 23.03.2020.

******

ಕೋವಿಡ್–19 (ಕೊರೊನಾ ವೈರಸ್) ಕಾಯಿಲೆಯು ಸಾಂಕ್ರಾಮಿಕ ರೋಗವಾಗಿದ್ದು, ವಿಶ್ವದಾದ್ಯಂತ ಸಾರ್ವಜನಿಕರಲ್ಲಿ ವ್ಯಾಪಕವಾಗಿ ಹರಡುತ್ತಿರುವುದು ತಿಳಿದ ವಿಷಯವಾಗಿದೆ. ಈ ಕಾಯಿಲೆಯನ್ನು ನಿಯಂತ್ರಿಸಲು ಹಾಗೂ ಒಬ್ಬರಿಂದ ಒಬ್ಬರಿಗೆ ಹರಡದಂತೆ ತಡೆಗಟ್ಟಲು ಸರ್ಕಾರವು ಹಲವಾರು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದೆ. ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಈ ಸೋಂಕು ಹರಡದಂತೆ ಗ್ರಾಮ ಪಂಚಾಯತಿಗಳ ವತಿಯಿಂದ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಉಲ್ಲೇಖಿತ ಸರ್ಕಾರದ ಸುತ್ತೋಲೆಗಳಲ್ಲಿ ವಿವರವಾದ ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು.

ಪ್ರಸಕ್ತ ಸನ್ನಿವೇಶಕ್ಕನುಗುಣವಾಗಿ ಹೊಸದಾಗಿ ಗ್ರಾಮ ಪಂಚಾಯತಿ ಕಾರ್ಯಪಡೆ ಹಾಗೂ ಗ್ರಾಮ ಕಾರ್ಯಪಡೆಗಳನ್ನು ರಚಿಸಿ ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

1. **ಗ್ರಾಮ ಪಂಚಾಯತಿ ಮಟ್ಟದ ಕಾರ್ಯಪಡೆ.–**

| ಕ್ರ.ಸಂ. | ಸಮಿತಿ ಸದಸ್ಯರ ವಿವರ | ಹುದ್ದೆ |
|---|---|---|
| 1 | ಗ್ರಾಮ ಪಂಚಾಯತಿ ಅಧ್ಯಕ್ಷರು | ಅಧ್ಯಕ್ಷರು |
| 2 | ಗ್ರಾಮ ಪಂಚಾಯತಿ ಉಪಾಧ್ಯಕ್ಷರು | ಉಪಾಧ್ಯಕ್ಷರು |
| 3 | ಗ್ರಾಮ ಪಂಚಾಯತಿಯ ಪ್ರತಿಯೊಂದು ಗ್ರಾಮದ ಒಬ್ಬ ಸದಸ್ಯರು (ಗ್ರಾಮದಲ್ಲಿ ಒಬ್ಬರಿಗಿಂತ ಹೆಚ್ಚು ಸದಸ್ಯರಿದ್ದಲ್ಲಿ ಒಬ್ಬರನ್ನು ಗ್ರಾಮ ಪಂಚಾಯತಿ ಅಧ್ಯಕ್ಷರು ನಾಮನಿರ್ದೇಶಿಸುವುದು) | ಸದಸ್ಯರು |
| 4 | ಕೇಂದ್ರ ಸ್ಥಾನದ ಗ್ರಾಮ ಲೆಕ್ಕಾಧಿಕಾರಿ/ಕಂದಾಯ ನಿರೀಕ್ಷಕರು/ ಹೋಬಳಿ ಕೇಂದ್ರ ಸ್ಥಾನವಾಗಿದ್ದಲ್ಲಿ ಉಪ ತಹಶೀಲ್ದಾರ್ | ಸದಸ್ಯರು |
| 5 | ಸ್ಥಳೀಯ ಪೊಲೀಸ್ ಠಾಣೆಯ ಎಸ್.ಎಚ್.ಓ. ಅಥವಾ ಅವರು ನೇಮಿಸಿದ ಪ್ರತಿನಿಧಿ | ಸದಸ್ಯರು |
| 6 | ಸ್ಥಳೀಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಅಥವಾ ಅವರ ಪ್ರತಿನಿಧಿ | ಸದಸ್ಯರು |



Scanned with CamScanner

| | | |
|---|---|---|
| 7 | ಅಂಗನವಾಡಿ ಮೇಲ್ವಿಚಾರಕರು ಅಥವಾ ಅವರ ಪ್ರತಿನಿಧಿ | ಸದಸ್ಯರು |
| 8 | ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರು/ಆಶಾ ಕಾರ್ಯಕರ್ತೆಯರು/MLHP/MHW | ಸದಸ್ಯರು |
| 9 | ಸ್ತ್ರೀಶಕ್ತಿ ಸ್ವ ಸಹಾಯ ಗುಂಪುಗಳ ಪ್ರತಿನಿಧಿ | ಸದಸ್ಯರು |
| 10 | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ | ಸದಸ್ಯ ಕಾರ್ಯದರ್ಶಿ |

**ವಿಶೇಷ ಆಹ್ವಾನಿತರು:**

1. ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೋಂದಾಯಿತ ವೈದ್ಯರು.
2. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿ.
3. ಗ್ರಾಮ ಪಂಚಾಯತಿ ವ್ಯಾಪ್ತಿಯ ಶಾಲಾ ಮುಖ್ಯ ಶಿಕ್ಷಕರು.
4. ಗ್ರಾಮ ಪಂಚಾಯತಿ ವ್ಯಾಪ್ತಿಯ ಬ್ಯಾಂಕ್ ವ್ಯವಸ್ಥಾಪಕರು ಅಥವಾ ಅವರ ಪ್ರತಿನಿಧಿ.
5. ಗ್ರಾಮ ಪಂಚಾಯತಿ ವ್ಯಾಪ್ತಿಯ ನ್ಯಾಯಬೆಲೆ ಅಂಗಡಿಯ ಪ್ರತಿನಿಧಿ.

***ಮೇಲಿನ ಸದಸ್ಯರುಗಳಲ್ಲಿ ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಹಾಗೂ ಮಹಿಳಾ ಪ್ರತಿನಿಧಿಗಳು ಸದಸ್ಯರಾಗಿರುವಂತೆ ನೋಡಿಕೊಳ್ಳುವುದು.***

**ಸಮಿತಿಯ ಜವಾಬ್ದಾರಿಗಳು.–**

1) ಕೋವಿಡ್–19 (ಕೊರೊನಾ ವೈರಸ್) ನಿಯಂತ್ರಣದ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಜಿಲ್ಲಾಧಿಕಾರಿಗಳು ಹೊರಡಿಸಿರುವ ಮಾರ್ಗಸೂಚಿ/ಸುತ್ತೋಲೆ ಹಾಗೂ ಸೂಚನೆಗಳನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸುವುದು.

2) ಕೊರೊನಾ ವೈರಸ್ ನಿಯಂತ್ರಣದ ಬಗ್ಗೆ ಸಮೀಪದ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಿಂದ ಸಲಹೆ ಪಡೆಯುವುದು.

3) ಪ್ರತಿ ಸೋಮವಾರ ಹಾಗೂ ಗುರುವಾರ ಸಭೆ ಆಯೋಜಿಸುವುದು. ಸದರಿ ಸಮಿತಿಯು ಸಭೆ ಸೇರಿದಾಗ ಸದಸ್ಯರುಗಳು ಕನಿಷ್ಠ 1 ಮೀಟರ್ ಅಂತರ ಕಾಯ್ದುಕೊಂಡು ಕುಳಿತುಕೊಳ್ಳುವುದು ಹಾಗೂ ಸಭೆ ಸೇರುವ ಮುನ್ನ ಸಾಬೂನಿನಿಂದ ಕೈ/ಕಾಲುಗಳನ್ನು ಸ್ವಚ್ಛವಾಗಿ ತೊಳೆದುಕೊಂಡು ಶುಚಿತ್ವವನ್ನು ಕಾಪಾಡುವುದು.

4) ಸಭೆಯ ಕಾರ್ಯಸೂಚಿಯನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿ, ವೈದ್ಯಾಧಿಕಾರಿಗಳೊಂದಿಗೆ ಚರ್ಚಿಸಿ ಸಿದ್ಧಪಡಿಸುವುದು.



Scanned with CamScanner

5) ಸಮಿತಿಯ ಸದಸ್ಯರ ಹೆಸರು ಹಾಗೂ ದೂರವಾಣಿ ಸಂಖ್ಯೆಯನ್ನು ಪಂಚತಂತ್ರದಲ್ಲಿ ಅಳವಡಿಸುವುದು.

6) ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಮೊಬೈಲ್ ದೂರವಾಣಿ ಸಂಖ್ಯೆಯನ್ನು ಸಾರ್ವಜನಿಕವಾಗಿ ಪ್ರಕಟಿಸುವುದು. ಅವರು ಸಮಿತಿಯ ಎಲ್ಲಾ ಸದಸ್ಯರುಗಳು ಹಾಗೂ ಸಾರ್ವಜನಿಕರಿಗೆ ಎಲ್ಲಾ ಸಮಯದಲ್ಲಿಯೂ ಸಂಪರ್ಕಕ್ಕೆ ಲಭ್ಯವಿರುವುದು.

7) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಐದು ಜನಕ್ಕಿಂತ ಹೆಚ್ಚು ಜನರು ಸೇರದಂತೆ ನೋಡಿಕೊಳ್ಳುವುದು. ಮದುವೆ, ಜಾತ್ರೆ, ಮೆರವಣಿಗೆ, ಸಂತೆ ಹಾಗೂ ಧಾರ್ಮಿಕ ಮತ್ತು ಇತರೆ ಗುಂಪು ಸೇರುವ ಚಟುವಟಿಕೆಗಳನ್ನು ನಿಯಂತ್ರಿಸುವುದು.

8) ಅತ್ಯಾವಶ್ಯಕ ವಸ್ತುಗಳ ಸಾಮಗ್ರಿಗಳನ್ನು ಖರೀದಿ ಮಾಡುವ ಸ್ಥಳಗಳಲ್ಲಿ (ದಿನಸಿ ಅಂಗಡಿ, ಹಾಲು ಕೇಂದ್ರ, ನ್ಯಾಯ ಬೆಲೆ ಅಂಗಡಿ, ಬ್ಯಾಂಕುಗಳು, ಎ.ಟಿ.ಎಂ. ಕೇಂದ್ರಗಳು, ಅರಳಿಕಟ್ಟೆಗಳು, ಧಾರ್ಮಿಕ ಸ್ಥಳಗಳು ಮತ್ತು ಔಷಧಿ ಅಂಗಡಿ) ವ್ಯಕ್ತಿಗಳ ನಡುವೆ ಕನಿಷ್ಠ 1 ಮೀಟರ್ ಅಂತರ ಕಾಯ್ದುಕೊಳ್ಳುವಂತೆ ಕ್ರಮ ವಹಿಸುವುದು. ಇದಕ್ಕೆ ಅನುಕೂಲವಾಗುವಂತೆ ಇಂತಹ ಸ್ಥಳಗಳಲ್ಲಿ ಚೌಕ ಗುರುತುಗಳನ್ನು ಮಾಡುವುದು. ಈ ಕ್ರಮಗಳನ್ನು ಕೈಗೊಂಡಿರುವ ಅಂಗಡಿಗಳಿಗೆ ಮಾತ್ರ ತೆರೆದಿರಲು ಅವಕಾಶ ಮಾಡುವುದು.

9) ಪ್ರತಿ ಗ್ರಾಮದಲ್ಲಿ ಮೇಲೆ ತಿಳಿಸಿರುವ ಸ್ಥಳಗಳಲ್ಲಿ ಜನರು ಗುಂಪು ಸೇರುವುದನ್ನು ನಿಯಂತ್ರಿಸಲು ಹಾಗೂ ನಿಯಮಿತವಾಗಿ ಕ್ಯೂ ಪದ್ಧತಿಯಲ್ಲಿ ಒಂದು ಮೀಟರ್ ಅಂತರವನ್ನು ಅನುಷ್ಠಾನ ಮಾಡಲು ಪ್ರತಿ ಸಾವಿರ ಜನಸಂಖ್ಯೆಗೆ ಇಬ್ಬರು (ಮಹಿಳೆ-1, ಪುರುಷ-1) ಗ್ರಾಮದಲ್ಲಿನ ಆರೋಗ್ಯಕರ/ದೃಢಕಾಯ/ಜವಾಬ್ದಾರಿಯುತ/ಸ್ಮಾರ್ಟ್ ಫೋನ್ ಹೊಂದಿರುವ ಕನಿಷ್ಠ 18 ರಿಂದ 35 ವಯಸ್ಸಿನ ಯುವಕ/ಯುವತಿಯರನ್ನು ಗ್ರಾಮ ಕೊರೊನಾ ಸೈನಿಕರಾಗಿ ನೇಮಿಸಿಕೊಂಡು ಸೇವೆ ಪಡೆಯುವುದು. ಸದರಿ ಕೊರೊನಾ ಸೈನಿಕರಿಗೆ ಯಾವುದೇ ಸಂಭಾವನೆ ಇರುವುದಿಲ್ಲ (ಸದರಿ ಸೈನಿಕರನ್ನು ಆಯ್ಕೆ ಮಾಡುವಾಗ ಎನ್.ಸಿ.ಸಿ/ಎನ್.ಎಸ್.ಎಸ್. ಕೆಡೆಟ್ಸ್‌ಗಳಿಗೆ ಆದ್ಯತೆ ನೀಡುವುದು). ಇವರಿಗೆ ತರಬೇತಿಯನ್ನು ಇಲಾಖಾ ವತಿಯಿಂದ ಆಯೋಜಿಸಲಾಗುವುದು.

10) ಕೊರೊನಾ ಸೈನಿಕರಿಗೆ ಮಾಸ್ಕ್ ಹಾಗೂ ಗ್ಲೌಸನ್ನು ನೀಡುವುದು, ಈ ಸೈನಿಕರು ಸಾರ್ವಜನಿಕರೊಂದಿಗೆ ಸೌಜನ್ಯತೆಯಿಂದ ವರ್ತಿಸುವುದು, ನಿಯಮಗಳ ಪಾಲನೆಯನ್ನು ಮಾಡಲು ಅವರಿಗೆ ಮನವೊಲಿಸುವುದು, ನಿಯಮಗಳನ್ನು ಉಲ್ಲಂಘನೆ ಮಾಡುವವರ ಕುರಿತು ಕಾರ್ಯಪಡೆಗೆ ವರದಿ ಮಾಡುವುದು.



Scanned with CamScanner

11) ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಗಳು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮದ, ಪ್ರಕರಣ 91 ರಂತೆ ಹಾಗೂ ಇತರೆ ಪ್ರಕರಣಗಳಂತೆ ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ಅವಶ್ಯವಿದ್ದಲ್ಲಿ ದಂಡ ವಿಧಿಸುವುದು. ಒಂದು ವೇಳೆ ನಿಯಮಗಳನ್ನು ಪದೇ ಪದೇ ಉಲ್ಲಂಘನೆ ಮಾಡಿದ್ದಲ್ಲಿ ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ಗ್ರಾಮ ಪಂಚಾಯತಿ ವ್ಯಾಪ್ತಿಯ ಪೊಲೀಸ್ ಠಾಣೆಗೆ ದೂರು ನೀಡುವುದು.

12) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬೆಳಿಗ್ಗೆ 7.00 ರಿಂದ 9.00 ಗಂಟೆ ಮತ್ತು ಸಾಯಂಕಾಲ 5.00 ರಿಂದ 7.00 ಗಂಟೆಯವರೆಗೆ ಧ್ವನಿ ವರ್ಧಕದ ಮೂಲಕ ಕೊರೊನಾ ವೈರಸ್ ಬಗ್ಗೆ ಅರಿವು ಮೂಡಿಸಲು ಕ್ರಮ ವಹಿಸುವುದು ಹಾಗೂ ಸದರಿ ಪ್ರಚಾರಕ್ಕೆ ಬಳಸಲಾಗುವ ಆಟೋ ಅಥವಾ ವಾಹನಗಳನ್ನು ಬಿಸಿಯೂಟ ಫಲಾನುಭವಿಗಳಿಗೆ ಆಹಾರ ವಿತರಣೆಗೂ ಬಳಸಿಕೊಳ್ಳಬಹುದು.

13) ಪ್ರಚಾರದಲ್ಲಿ ಉದ್ಯೋಗ ಖಾತ್ರಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಕೂಲಿಕರರಿಗೆ ಕೊರೊನಾ ವೈರಸ್ ಬಗ್ಗೆ ಅರಿವು ಮೂಡಿಸುವುದು ಹಾಗೂ ಕೆಲಸದ ಸಮಯದಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ಕನಿಷ್ಠ 1 ಮೀಟರ್ ಅಂತರ ಕಾಯ್ದುಕೊಳ್ಳುವಂತೆ ತಿಳಿಸುವುದು. ಪ್ರಚಾರಕ್ಕಾಗಿ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಐ.ಇ.ಸಿ. ಅನುದಾನವನ್ನು ಬಳಸಿಕೊಳ್ಳುವುದು.

14) ತಮ್ಮ ವ್ಯಾಪ್ತಿಯ ಎಲ್ಲಾ ಅಂಗನವಾಡಿಯಲ್ಲಿ ನೋಂದಾಯಿತ ಮಕ್ಕಳಿಗೆ/ ಮಹಿಳೆಯರಿಗೆ/ ಬಾಣಂತಿಯರಿಗೆ/ಇತರೆ ಫಲಾನುಭವಿಗಳಿಗೆ ಪಡಿತರ(ರೇಷನ್) ಸಾಮಗ್ರಿಗಳನ್ನು ಅವರ ಮನೆಗಳಿಗೆ ತಲುಪಿಸುವಂತೆ ಅಂಗನವಾಡಿ ಕಾರ್ಯಕರ್ತೆಯರು ನಿರ್ವಹಿಸುವಂತೆ ನೋಡಿಕೊಳ್ಳುವುದು.

15) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇತ್ತೀಚೆಗೆ ಬೇರೆ ನಗರಗಳಿಂದ ಬಂದಿರುವ ವ್ಯಕ್ತಿಗಳನ್ನು ಗುರುತಿಸಿ, ಅಂತಹ ಮನೆಗಳ ಮೇಲೆ ನಿಗಾ ಇಡುವುದು ಹಾಗೂ ಯಾವುದಾದರೂ ಅನಾರೋಗ್ಯದ ಲಕ್ಷಣಗಳು ಕಂಡುಬಂದರೆ ಕೂಡಲೇ ವೈದ್ಯಾಧಿಕಾರಿಗಳಿಗೆ ತಿಳಿಸುವುದು ಹಾಗೂ ಹೋಮ್ ಕ್ವಾರಂಟೈನ್‌ಗೆ (ಮನೆ ಪ್ರತ್ಯೇಕ ವಾಸ) ವ್ಯವಸ್ಥೆ ಮಾಡಿ ಕೂಡಲೇ ಜಿಲ್ಲಾಡಳಿತದ ಗಮನಕ್ಕೆ ತರುವುದು.

16) ಗ್ರಾಮದಲ್ಲಿರುವ 60 ವರ್ಷ ಮೇಲ್ಪಟ್ಟವರಲ್ಲಿ ಮಧು ಮೇಹ, ಉಸಿರಾಟ ಸಮಸ್ಯೆ, ರಕ್ತದ ಒತ್ತಡ, ಆಸ್ತಮ (ದಮ್ಮು), ಮೂತ್ರಪಿಂಡ ಕಾಯಿಲೆ ಹಾಗೂ ಇತರೆ ಗಂಭೀರ ಕಾಯಿಲೆ ಇರುವರನ್ನು ಆಶಾ ಕಾರ್ಯಕರ್ತೆಯರಿಂದ ಪಟ್ಟಿ ಮಾಡಿಸಿ ಅಂತಹವರ ಆರೋಗ್ಯದ ಬಗ್ಗೆ ನಿಗಾ ಇಡುವುದು. ಸದರಿ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಔಷಧಿಗಳ ಬೇಡಿಕೆಯನ್ನು ಕಾರ್ಯಪಡೆಯು ಸ್ಥಳೀಯ ವೈದ್ಯಾಧಿಕಾರಿ ಹಾಗೂ ಔಷಧಿ ಅಂಗಡಿಗೆ ತಿಳಿಸುವುದು. ಒಂದು ವೇಳೆ ಔಷಧಿಗಳ ವ್ಯವಸ್ಥೆ ಆಗದಿದ್ದಲ್ಲಿ ಜಿಲ್ಲಾಧಿಕಾರಿ/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಗಮನಕ್ಕೆ ತರುವುದು.



Scanned with CamScanner

17) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಯಾವುದಾದರೂ ಕಟ್ಟಡ ಕಾರ್ಮಿಕರು, ವಲಸೆ ಕಾರ್ಮಿಕರು, ಬೇರೆ ರಾಜ್ಯಗಳಿಂದ ಕಟ್ಟಡ ಕೆಲಸಗಳಿಗೆ ಅಥವಾ ಇನ್ನಿತರ ಯಾವುದಾದರೂ ಕೆಲಸಗಳಿಗೆ ಗ್ರಾಮಗಳಲ್ಲಿ ಬಂದಿದ್ದು, ಅವರು ತಮ್ಮ ಪ್ರದೇಶಗಳಿಗೆ ವಾಪಸ್ಸಾಗದೆ ಗ್ರಾಮಗಳಲ್ಲಿ ಉಳಿದುಕೊಂಡಿದ್ದರೆ ಅಂತಹವರನ್ನು ಗ್ರಾಮದಲ್ಲಿರುವ ಸಮುದಾಯ ಭವನ, ದೇವಸ್ಥಾನ, ಶಾಲೆಗಳು ಅಥವಾ ಛತ್ರಗಳಲ್ಲಿ ಅವರುಗಳಿಗೆ ಉಳಿದುಕೊಳ್ಳಲು ಅವಕಾಶ ಕಲ್ಪಿಸುವುದು ಹಾಗೂ ಈ ಬಗ್ಗೆ ಕಾರ್ಮಿಕ ಇಲಾಖೆಯ ಕಟ್ಟಡ ಕಾರ್ಮಿಕರ ಸಹಾಯವಾಣಿ 155214ಗೆ ಕರೆ ಮಾಡುವುದು ಹಾಗೂ ಜಿಲ್ಲಾ ಕಾರ್ಮಿಕ ಅಧಿಕಾರಿಗೆ ತಿಳಿಸುವುದು.

18) ತಾತ್ಕಾಲಿಕವಾಗಿ ಅವರುಗಳಿಗೆ ಕನಿಷ್ಠ ಸೌಲಭ್ಯಗಳು ಹಾಗೂ ಊಟದ ವ್ಯವಸ್ಥೆಯನ್ನು ಗ್ರಾಮ ಪಂಚಾಯತಿಯಿಂದ ಒದಗಿಸುವುದು. ಈ ರೀತಿಯ ಕಾರ್ಮಿಕರು ಹೆಚ್ಚಿನ ಪ್ರಮಾಣದಲ್ಲಿ ಇದ್ದಲ್ಲಿ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಿ S.D.R.F. ಅನುದಾನದಲ್ಲಿ ಧನ ಸಹಾಯ ಪಡೆಯುವುದು. ಇಂತಹವರನ್ನು ಗುರುತಿಸಿ ಅವರುಗಳ ವಿವರಗಳನ್ನು ಜಿಲ್ಲಾಡಳಿತಕ್ಕೆ ಸಲ್ಲಿಸುವುದು.

19) ಒಂದು ವೇಳೆ ಹೆಚ್ಚಿನ ಸಂಖ್ಯೆಯಲ್ಲಿ ಪಡಿತರ ಚೀಟಿಗಳಿಲ್ಲದ (Ration Card) ಬಡ ಕುಟುಂಬಗಳು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿದ್ದರೆ ಅವರಿಗೆ ಊಟದ ವ್ಯವಸ್ಥೆಯನ್ನು ಕಲ್ಪಿಸುವುದು, ಇದಕ್ಕಾಗಿ ಸ್ಥಳೀಯವಾಗಿ ದೇಣಿಗೆಗಳನ್ನು (ಹಣ ಹಾಗೂ ಉಪಚಾರಗಳು) ಪಡೆದು ಇಂತಹ ಕುಟುಂಬಗಳಿಗೆ ಉಪಯೋಗಿಸಲು ಕ್ರಮ ವಹಿಸುವುದು. ಅಗತ್ಯವಿದ್ದಲ್ಲಿ ಪಡಿತರ ವ್ಯವಸ್ಥೆಯನ್ನು ಕಲ್ಪಿಸುವಂತೆ ಸೂಕ್ತ ಪ್ರಸ್ತಾವನೆಯನ್ನು ಜಿಲ್ಲಾಡಳಿತಕ್ಕೆ ಸಲ್ಲಿಸುವುದು.

20) ಗ್ರಾಮದಲ್ಲಿ ಅಗತ್ಯ ವಸ್ತುಗಳು (ಉದಾ: ದವಸ ಧಾನ್ಯಗಳು, ಹಾಲು, ತರಕಾರಿ, ಔಷಧಿಗಳು, ಸೋಪು/ಸಾಬೂನು ಇತ್ಯಾದಿ), ಮಾಸ್ಕ್, ಹ್ಯಾಂಡ್ ಸ್ಯಾನಿಟೈಸರ್, ಸ್ವಚ್ಛತೆ ಸಿಬ್ಬಂದಿಗಳು ಕೊರತೆ ಇದ್ದಲ್ಲಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಗಮನಕ್ಕೆ ತರುವುದು.

21) ಕೊರೊನಾ ಕಾಯಿಲೆಯ ಬಗ್ಗೆ ಗ್ರಾಮಗಳಲ್ಲಿ ಸುಳ್ಳು ವದಂತಿಗಳನ್ನು ಹರಡದಂತೆ ಕಾರ್ಯಪಡೆಯು ನೋಡಿಕೊಳ್ಳುವುದು.

22) ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕೂಲಿ ಕಾರ್ಮಿಕರು ಸಣ್ಣ ಸಣ್ಣ ತಂಡಗಳಲ್ಲಿ ವಿಂಗಡಿಸಿ ಕೆಲಸ ನಿರ್ವಹಿಸಲು ಅವಕಾಶ ಕಲ್ಪಿಸುವುದು. ಉದ್ಯೋಗ ಸ್ಥಳದಲ್ಲಿ ನಿಯಮಿತವಾಗಿ ಸ್ವಚ್ಛತೆಯಿಂದ ಇರುವ ಬಗ್ಗೆ ತಿಳುವಳಿಕೆ ನೀಡಬೇಕು. ಕೆಲಸಕ್ಕೆ ಬರುವ ಕೆಲಸಗಾರರಲ್ಲಿ ಕೊರೊನಾ ವೈರಸ್ ಲಕ್ಷಣಗಳು ಕಂಡು ಬಂದಲ್ಲಿ ತಕ್ಷಣ ಜಿಲ್ಲಾಡಳಿತಕ್ಕೆ ಮಾಹಿತಿ ನೀಡಿ, ಜಿಲ್ಲಾಡಳಿತದಿಂದ ಸೂಕ್ತ ಮಾರ್ಗದರ್ಶನ ಪಡೆಯಬೇಕು.



Scanned with CamScanner

23)ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮಗಳಲ್ಲಿ ಪ್ರತಿ ದಿನ ಸ್ವಚ್ಛತೆಯನ್ನು ಕಾಯ್ದುಕೊಂಡು ಹೋಗಲು ನಿಗಾವಹಿಸಬೇಕು ಹಾಗೂ ಗ್ರಾಮಗಳನ್ನು ಸ್ವಚ್ಛಗೊಳಿಸಲು ಸೋಂಕು ನಿವಾರಣಾ ಔಷಧಿಗಳ ಸಿಂಪಡಣೆಯನ್ನು ಕನಿಷ್ಠ ಎರಡು ದಿನಗಳಿಗೊಮ್ಮೆ ಮಾಡಿಸುವುದು. ಇದನ್ನು ಒಂದು ಅಭಿಯಾನವಾಗಿ ತೆಗೆದುಕೊಂಡು ಚರಂಡಿಗಳನ್ನು ಸ್ವಚ್ಛಗೊಳಿಸಬೇಕು. ಕಸ ವಿಲೇವಾರಿಯನ್ನು ಸರಿಯಾಗಿ ಮಾಡಬೇಕು. ಈ ಕಾರ್ಯಗಳಿಗೆ ಯಾರಾದರೂ ಅಡ್ಡಿಪಡಿಸಿದಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 91 ರಂತೆ ಕ್ರಮ ಕೈಗೊಳ್ಳುವುದು ಅಥವಾ ಗ್ರಾಮ ಪಂಚಾಯತಿ ವ್ಯಾಪ್ತಿಯ ಪೊಲೀಸ್ ಠಾಣೆಗೆ ದೂರು ನೀಡಬಹುದು.

24) ಸ್ವಚ್ಚತಾಗಾರರು ಮತ್ತು ಘನ ತ್ಯಾಜ್ಯ ನಿರ್ವಹಣೆ ಮಾಡುವ ಸಿಬ್ಬಂದಿಗೆ ಮಾಸ್ಕ್, ಗ್ಲೌಸ್ ಮತ್ತು ಬೂಟ್ಸ್ (ಪುಟ್‌ವೇರ್) ಗಳನ್ನು ಒದಗಿಸುವುದು. ಸ್ವಚ್ಛತಗಾರರಿಗೆ ಕೊರೊನಾ ವೈರಸ್ ಬಗ್ಗೆ ಮುಂಜಾಗ್ರತೆಯಾಗಿ ತರಬೇತಿ ನೀಡುವುದು.

25)ಗ್ರಾಮ ಪಂಚಾಯಿತಿ ಕಛೇರಿ, ಬಸ್ ಸ್ಟ್ಯಾಂಡ್ ಮತ್ತಿತರ ಸಾರ್ವಜನಿಕ ಸ್ಥಳಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಸಾಬೂನಿನಿಂದ ಕೈತೊಳೆದುಕೊಳ್ಳಲು ಸಾಬೂನು ಹಾಗೂ ನೀರಿನ ವ್ಯವಸ್ಥೆಯನ್ನು ಕಡ್ಡಾಯವಾಗಿ ಕಲ್ಪಿಸುವುದು.

26) ಗ್ರಾಮ ಪಂಚಾಯಿತಿಗಳು 14ನೇ ಹಣಕಾಸು ಆಯೋಗದ ಅನುದಾನ ಅಥವಾ ಸ್ವಂತ ಸಂಪನ್ಮೂಲದಿಂದ ಅವಶ್ಯ ಮಾಸ್ಕಗಳು, ಸಾಬೂನುಗಳು ಮತ್ತು ಸ್ಯಾನಿಟೈಸರ್ ಇತ್ಯಾದಿ ಸ್ವಚ್ಛತಾ ಪರಿಕರಗಳನ್ನು ಖರೀದಿಸುವುದು.

27)ಸ್ಥಳೀಯ ಸ್ವ-ಸಹಾಯ ಗುಂಪುಗಳ ಮೂಲಕ ಸ್ಥಳೀಯವಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಂದ ತಾಂತ್ರಿಕವಾಗಿ ಸಲಹೆ ಪಡೆದು ಬಟ್ಟೆಗಳಿಂದ ಮಾಸ್ಕಗಳನ್ನು ಹಾಗೂ ಸಾಬೂನು-ಫಿನಾಯಿಲ್ ಇತರೆ ಶುಚಿತ್ವ ವಸ್ತುಗಳನ್ನು ಸ್ಥಳೀಯವಾಗಿ ಉತ್ಪಾದಿಸಲು ಕ್ರಮ ಕೈಗೊಳ್ಳುವುದು. ಇದಕ್ಕೆ ಸ್ವಸಹಾಯ ಗುಂಪುಗಳಿಗೆ ಅವಶ್ಯ ತರಬೇತಿಯನ್ನು ಕೊಡಿಸುವುದು.

28)ಗ್ರಾಮ ಪಂಚಾಯತಿ ಕಾರ್ಯಪಡೆ, ಗ್ರಾಮ ಕಾರ್ಯಪಡೆ ಹಾಗೂ ಕೊರೊನಾ ಸೈನಿಕರಿಗೆ ಗ್ರಾಮ ಪಂಚಾಯತಿಯಿಂದ ಗುರುತಿನ ಚೀಟಿಯನ್ನು ಗ್ರಾಮ ಪಂಚಾಯತಿ ಅಧ್ಯಕ್ಷರು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿ ರವರ ಸಹಿಯೊಂದಿಗೆ ಒದಗಿಸುವುದು.



Scanned with CamScanner

## II. ಗ್ರಾಮ ಮಟ್ಟದ ಕಾರ್ಯಪಡೆ.–

| ಕ್ರ.ಸಂ. | ಸಮಿತಿ ಸದಸ್ಯರ ವಿವರ | ಹುದ್ದೆ |
|---|---|---|
| 1 | ಗ್ರಾಮ ಪಂಚಾಯತಿ ಸದಸ್ಯರು (ಗ್ರಾಮದಲ್ಲಿ ಒಬ್ಬರಿಗಿಂತ ಹೆಚ್ಚು ಸದಸ್ಯರಿದ್ದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರು ಒಬ್ಬರನ್ನು ನಾಮ ನಿರ್ದೇಶಿಸುವುದು) | ಅಧ್ಯಕ್ಷರು |
| 2 | ಗ್ರಾಮದ ಇತರ ಗ್ರಾಮ ಪಂಚಾಯತಿ ಸದಸ್ಯರು | ಸದಸ್ಯರು |
| 3 | ವೈದ್ಯಾಧಿಕಾರಿಗಳು ಅಥವಾ ಅವರ ಪ್ರತಿನಿಧಿ | ಸದಸ್ಯರು |
| 4 | ಗ್ರಾಮ ಲೆಕ್ಕಿಗರು | ಸದಸ್ಯರು |
| 5 | ಗ್ರಾಮದ ಎಲ್ಲಾ ಆಶಾ ಕಾರ್ಯಕರ್ತೆಯರು | ಸದಸ್ಯರು |
| 6 | ಗ್ರಾಮದ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು | ಸದಸ್ಯರು |
| 7 | ವಾಟರ್‌ಮ್ಯಾನ್ (ನೀರುಗಂಟಿ) | ಸದಸ್ಯರು |
| 8 | ಎಲ್ಲಾ ಕೊರೊನಾ ಸೈನಿಕರು | ಸದಸ್ಯರು |
| 9 | ಪಂಚಾಯತಿ ಅಭಿವೃದ್ಧಿ ಅಧಿಕಾರಿಯಿಂದ ನಾಮನಿರ್ದೇಶಿತ ಗ್ರಾಮ ಪಂಚಾಯತಿ ಸಿಬ್ಬಂದಿ/ವಿ.ಆರ್.ಪಿ/ಸಿ.ಆರ್.ಪಿ. | ಸಂಯೋಜಕರು |

**ಗ್ರಾಮ ಮಟ್ಟದ ಕಾರ್ಯಪಡೆಯ ಜವಾಬ್ದಾರಿಗಳು.–**

1) ಗ್ರಾಮ ಮಟ್ಟದ ಕಾರ್ಯಪಡೆಯು ಗ್ರಾಮ ಪಂಚಾಯತಿ ಮಟ್ಟದ ಕಾರ್ಯಪಡೆಯು ನೀಡುವ ಕಾರ್ಯಚಟುವಟಿಕೆಗಳನ್ನು/ಸೂಚನೆಗಳನ್ನು ಪಾಲಿಸುವುದು.

2) ಕೊರೊನಾ ವೈರಸ್ ನಿಯಂತ್ರಣದ ಬಗ್ಗೆ ಸಮೀಪದ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳಿಂದ ಸಮಿತಿ ಸದಸ್ಯರುಗಳಿಗೆ ಮಾಹಿತಿ ಕೊಡಿಸುವುದು.

3) ಪ್ರತಿ ದಿನ ಬೆಳಿಗ್ಗೆ 9.00 ಗಂಟೆಗೆ ಸಭೆ ಸೇರುವುದು ಹಾಗೂ ಸಭೆಯ ಮಾಹಿತಿಯನ್ನು ಸಂಯೋಜಕರು, ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರಿಗೆ ವಾಟ್ಸ್‌ಆಪ್ ಮೂಲಕ ವರದಿ ಸಲ್ಲಿಸುವುದು. ಸಭೆಯಲ್ಲಿ ಹಿಂದಿನ ದಿನ ತೀರ್ಮಾನಗಳ ಅನುಷ್ಠಾನಗಳ ಬಗ್ಗೆ ತೆಗೆದುಕೊಂಡ ಕ್ರಮದ ಬಗ್ಗೆ ಚರ್ಚಿಸುವುದು ಹಾಗೂ ಆ ದಿನದ ಕಾರ್ಯಕ್ರಮಗಳ ಬಗ್ಗೆ ಕಾರ್ಯಹಂಚಿಕೆ ಮಾಡಿಕೊಂಡು ಮನೆಗಳಿಗೆ, ಸ್ಥಳಗಳಿಗೆ, ನೀರು ಸಂಸ್ಕರಣಾ ಘಟಕಗಳಿಗೆ ಹಾಗೂ ಇತರೆ ಸ್ಥಳಗಳಿಗೆ ಭೇಟಿ ನೀಡುವುದು.

4) ಸಮಿತಿಯು ಸಭೆ ಸೇರಿದಾಗ ಸದಸ್ಯರುಗಳು ಕನಿಷ್ಠ 1 ಮೀಟರ್ ಅಂತರ ಕಾಯ್ದುಕೊಂಡು ಕುಳಿತುಕೊಳ್ಳುವುದು ಹಾಗೂ ಸಭೆ ಸೇರುವ ಮುನ್ನ ಸಾಬೂನಿನಿಂದ ಕೈ/ಕಾಲುಗಳನ್ನು ಸ್ವಚ್ಛವಾಗಿ ತೊಳೆದುಕೊಂಡು ಶುಚಿತ್ವವನ್ನು ಕಾಪಾಡುವುದು.



Scanned with CamScanner

5) ಸಮಿತಿಯ ಸದಸ್ಯರು ಹೆಸರು ದೂರವಾಣಿ ಸಂಖ್ಯೆಯನ್ನು ಸಂಗ್ರಹಿಸಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರಿಗೆ ನೀಡುವುದು.

6) ಗ್ರಾಮದಲ್ಲಿ 5 ಜನಕ್ಕಿಂತ ಹೆಚ್ಚು ಜನರು ಸೇರದಂತೆ ನೋಡಿಕೊಳ್ಳುವುದು. ಮದುವೆ, ಜಾತ್ರೆ, ಮೆರವಣಿಗೆ, ಸಂತೆ ಹಾಗೂ ಧಾರ್ಮಿಕ ಹಾಗೂ ಇತರೆ ಗುಂಪು ಸೇರುವ ಚಟುವಟಿಕೆಗಳನ್ನು ನಿಯಂತ್ರಿಸುವುದು.

7) ಅತ್ಯಾವಶ್ಯಕ ವಸ್ತುಗಳ ಸಾಮಗ್ರಿಗಳನ್ನು ಖರೀದಿ ಮಾಡುವ ಸ್ಥಳಗಳಲ್ಲಿ (ದಿನಸಿ ಅಂಗಡಿ, ಹಾಲು ಕೇಂದ್ರ, ನ್ಯಾಯ ಬೆಲೆ ಅಂಗಡಿ, ಬ್ಯಾಂಕುಗಳು, ಎ.ಟಿ.ಎಂ. ಕೇಂದ್ರಗಳು, ಅರಳಿಕಟ್ಟೆಗಳು, ಧಾರ್ಮಿಕ ಸ್ಥಳಗಳು ಮತ್ತು ಔಷಧಿ ಅಂಗಡಿ) ವ್ಯಕ್ತಿಗಳ ನಡುವೆ ಕನಿಷ್ಠ 1 ಮೀಟರ್ ಅಂತರ ಕಾಯ್ದುಕೊಳ್ಳುವಂತೆ ಕ್ರಮ ವಹಿಸುವುದು. ಇದಕ್ಕೆ ಅನುಕೂಲವಾಗುವಂತೆ ಇಂತಹ ಸ್ಥಳಗಳಲ್ಲಿ ಚೌಕ ಗುರುತುಗಳನ್ನು ಮಾಡುವುದು. ಈ ಕ್ರಮಗಳನ್ನು ಕೈಗೊಂಡಿರುವ ಅಂಗಡಿಗಳಿಗೆ ಮಾತ್ರ ತೆರೆದಿರಲು ಅವಕಾಶ ಮಾಡುವುದು.

8) ಪ್ರತಿ ಗ್ರಾಮದಲ್ಲಿ ಮೇಲೆ ತಿಳಿಸಿರುವ ಸ್ಥಳಗಳಲ್ಲಿ ಜನರು ಗುಂಪು ಸೇರುವುದನ್ನು ನಿಯಂತ್ರಿಸಲು ಹಾಗೂ ನಿಯಮಿತವಾಗಿ ಕ್ಯೂ ಪದ್ಧತಿಯಲ್ಲಿ ಒಂದು ಮೀಟರ್ ಅಂತರವನ್ನು ಅನುಷ್ಠಾನ ಮಾಡಲು ಪ್ರತಿ ಸಾವಿರ ಜನಸಂಖ್ಯೆಗೆ ಇಬ್ಬರು (ಮಹಿಳೆ-1, ಪುರುಷ-1) ಗ್ರಾಮದಲ್ಲಿನ ಆರೋಗ್ಯಕರ/ದೃಢಕಾಯ/ಜವಾಬ್ದಾರಿಯುತ/ಸ್ಮಾರ್ಟ್ ಫೋನ್ ಹೊಂದಿರುವ ಕನಿಷ್ಠ 18 ರಿಂದ 35 ವಯಸ್ಸಿನ ಯುವಕ/ಯುವತಿಯರನ್ನು ಗ್ರಾಮ ಕೊರೊನಾ ಸೈನಿಕರಾಗಿ ನೇಮಿಸಿಕೊಂಡು ಸೇವೆ ಪಡೆಯುವುದು. ಸದರಿ ಕೊರೊನಾ ಸೈನಿಕರಿಗೆ ಯಾವುದೇ ಸಂಭಾವನೆ ಇರುವುದಿಲ್ಲ (ಸದರಿ ಸೈನಿಕರನ್ನು ಆಯ್ಕೆ ಮಾಡುವಾಗ ಎನ್.ಸಿ.ಸಿ/ಎನ್.ಎಸ್.ಎಸ್. ಕೆಡೆಟ್ಸ್‌ಗಳಿಗೆ ಆದ್ಯತೆ ನೀಡುವುದು).

9) ಕೊರೊನಾ ಸೈನಿಕರಿಗೆ ಮಾಸ್ಕ್ ಹಾಗೂ ಗ್ಲೌಸನ್ನು ನೀಡುವುದು, ಈ ಸೈನಿಕರು ಸಾರ್ವಜನಿಕರೊಂದಿಗೆ ಸೌಜನ್ಯತೆಯಿಂದ ವರ್ತಿಸುವುದು, ನಿಯಮಗಳ ಪಾಲನೆಯನ್ನು ಮಾಡಲು ಅವರಿಗೆ ಮನವೊಲಿಸುವುದು, ನಿಯಮಗಳನ್ನು ಉಲ್ಲಂಘನೆ ಮಾಡುವವರ ಕುರಿತು ಕಾರ್ಯಪಡೆಗೆ ವರದಿ ಮಾಡುವುದು.

10) ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಗಳು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮದ, ಪ್ರಕರಣ 91 ರಂತೆ ಹಾಗೂ ಇತರೆ ಪ್ರಕರಣಗಳಂತೆ ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ಅವಶ್ಯವಿದ್ದಲ್ಲಿ ದಂಡ ವಿಧಿಸುವುದು. ಒಂದು ವೇಳೆ ನಿಯಮಗಳನ್ನು ಪದೇ ಪದೇ ಉಲ್ಲಂಘನೆ ಮಾಡಿದ್ದಲ್ಲಿ ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲು ಗ್ರಾಮ ಪಂಚಾಯತಿ ವ್ಯಾಪ್ತಿಯ ಪೊಲೀಸ್ ಠಾಣೆಗೆ ದೂರು ನೀಡುವುದು.



Scanned with CamScanner

11) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬೆಳಿಗ್ಗೆ 7.00 ರಿಂದ 9.00 ಗಂಟೆ ಮತ್ತು ಸಾಯಂಕಾಲ 5.00 ರಿಂದ 7.00 ಗಂಟೆಯವರೆಗೆ ಧ್ವನಿ ವರ್ಧಕದ ಮೂಲಕ ಕೊರೊನಾ ವೈರಸ್ ಬಗ್ಗೆ ಅರಿವು ಮೂಡಿಸುವುದು.

12) ತಮ್ಮ ವ್ಯಾಪ್ತಿಯ ಎಲ್ಲಾ ಅಂಗನವಾಡಿಯಲ್ಲಿ ನೋಂದಾಯಿತ ಮಕ್ಕಳಿಗೆ/ ಮಹಿಳೆಯರಿಗೆ/ ಬಾಣಂತಿಯರಿಗೆ/ಇತರೆ ಫಲಾನುಭವಿಗಳಿಗೆ ಪಡಿತರ(ರೇಷನ್) ಸಾಮಗ್ರಿಗಳನ್ನು ಅವರ ಮನೆಗಳಿಗೆ ತಲುಪಿಸುವಂತೆ ಅಂಗನವಾಡಿ ಕಾರ್ಯಕರ್ತೆಯರು ನಿರ್ವಹಿಸುವಂತೆ ನೋಡಿಕೊಳ್ಳುವುದು.

13) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇತ್ತೀಚೆಗೆ ಬೇರೆ ನಗರಗಳಿಂದ ಬಂದಿರುವ ವ್ಯಕ್ತಿಗಳನ್ನು ಗುರುತಿಸಿ, ಅಂತಹ ಮನೆಗಳ ಮೇಲೆ ನಿಗಾ ಇಡುವುದು ಹಾಗೂ ಯಾವುದಾದರೂ ಅನಾರೋಗ್ಯದ ಲಕ್ಷಣಗಳು ಕಂಡುಬಂದರೆ ಕೂಡಲೇ ವೈದ್ಯಾಧಿಕಾರಿಗಳಿಗೆ ತಿಳಿಸುವುದು ಹಾಗೂ ಹೋಮ್ ಕ್ವಾರಂಟೈನ್‌ಗೆ (ಮನೆ ಪ್ರತ್ಯೇಕ ವಾಸ) ವ್ಯವಸ್ಥೆ ಮಾಡಿ ಕೂಡಲೇ ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಗಮನಕ್ಕೆ ತರುವುದು.

14) ಗ್ರಾಮದಲ್ಲಿರುವ 60 ವರ್ಷ ಮೇಲ್ಪಟ್ಟವರಲ್ಲಿ ಮಧು ಮೇಹ, ಉಸಿರಾಟ ಸಮಸ್ಯೆ, ರಕ್ತದ ಒತ್ತಡ, ಅಸ್ತಮ (ದಮ್ಮು), ಮೂತ್ರಪಿಂಡ ಕಾಯಿಲೆ ಹಾಗೂ ಇತರೆ ಗಂಭೀರ ಕಾಯಿಲೆ ಇರುವವರನ್ನು ಆಶಾ ಕಾರ್ಯಕರ್ತೆಯರಿಂದ ಪಟ್ಟಿ ಮಾಡಿಸಿ ಅಂತಹವರ ಆರೋಗ್ಯದ ಬಗ್ಗೆ ನಿಗಾ ಇಡುವುದು. ಸದರಿ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಔಷಧಿಗಳ ಬೇಡಿಕೆಯನ್ನು ಕಾರ್ಯಪಡೆಯು ಸ್ಥಳೀಯ ವೈದ್ಯಾಧಿಕಾರಿ ಹಾಗೂ ಔಷಧಿ ಅಂಗಡಿಗೆ ತಿಳಿಸುವುದು. ಒಂದು ವೇಳೆ ಔಷಧಿಗಳ ವ್ಯವಸ್ಥೆ ಆಗದಿದ್ದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಗಮನಕ್ಕೆ ತರುವುದು.

15) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಯಾವುದಾದರೂ ಕಟ್ಟಡ ಕಾರ್ಮಿಕರು, ವಲಸೆ ಕಾರ್ಮಿಕರು, ಬೇರೆ ರಾಜ್ಯಗಳಿಂದ ಕಟ್ಟಡ ಕೆಲಸಗಳಿಗೆ ಅಥವಾ ಇನ್ನಿತರ ಯಾವುದಾದರೂ ಕೆಲಸಗಳಿಗೆ ಗ್ರಾಮಗಳಲ್ಲಿ ಬಂದಿದ್ದು, ಅವರು ತಮ್ಮ ಪ್ರದೇಶಗಳಿಗೆ ವಾಪಸ್ಸಾಗದೆ ಗ್ರಾಮಗಳಲ್ಲಿ ಉಳಿದುಕೊಂಡಿದ್ದರೆ ಅಂತಹವರನ್ನು ಗ್ರಾಮದಲ್ಲಿರುವ ಸಮುದಾಯ ಭವನ, ದೇವಸ್ಥಾನ, ಶಾಲೆಗಳು ಅಥವಾ ಛತ್ರಗಳಲ್ಲಿ ಅವರುಗಳಿಗೆ ಉಳಿದುಕೊಳ್ಳಲು ಅವಕಾಶ ಕಲ್ಪಿಸುವುದು ಇವರುಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಗಮನಕ್ಕೆ ತರುವುದು.

16) ಒಂದು ವೇಳೆ ಹೆಚ್ಚಿನ ಸಂಖ್ಯೆಯಲ್ಲಿ ಪಡಿತರ ಚೀಟಿಗಳಿಲ್ಲದ (Ration Card) ಬಡ ಕುಟುಂಬಗಳು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿದ್ದರೆ ಅವರಿಗೆ ಸಾಮೂಹಿಕ ಅಡುಗೆ ಮನೆ ವ್ಯವಸ್ಥೆಯನ್ನು ಕಲ್ಪಿಸಲು ಕ್ರಮ ಕೈಗೊಳ್ಳುವುದು. ಈ ಉದ್ದೇಶಕ್ಕೆ ಸ್ಥಳೀಯವಾಗಿ ದೇಣಿಗೆಗಳನ್ನು (ಹಣ ಹಾಗೂ ಉಪಚಾರಗಳು) ಪಡೆದು ಇಂತಹ ಕುಟುಂಬಗಳಿಗೆ ಉಪಯೋಗಿಸಲು ಕ್ರಮ ವಹಿಸುವುದು.



Scanned with CamScanner

ಅಗತ್ಯವಿದ್ದಲ್ಲಿ ಪಡಿತರ ವ್ಯವಸ್ಥೆಯನ್ನು ಕಲ್ಪಿಸುವಂತೆ ಸೂಕ್ತ ಪ್ರಸ್ತಾವನೆಯನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಸಲ್ಲಿಸುವುದು.

17) ಗ್ರಾಮದಲ್ಲಿ ಅಗತ್ಯ ವಸ್ತುಗಳು (ಉದಾ: ದವಸ ಧಾನ್ಯಗಳು, ಹಾಲು, ತರಕಾರಿ, ಔಷಧಿಗಳು, ಸೋಪು/ಸಾಬೂನು ಇತ್ಯಾದಿ), ಮಾಸ್ಕ್, ಹ್ಯಾಂಡ್ ಸ್ಯಾನಿಟೈಸರ್, ಸ್ವಚ್ಛತೆ ಸಿಬ್ಬಂದಿಗಳು ಕೊರತೆ ಇದ್ದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಗಮನಕ್ಕೆ ತರುವುದು.

18) ಕೊರೊನಾ ಕಾಯಿಲೆಯ ಬಗ್ಗೆ ಗ್ರಾಮಗಳಲ್ಲಿ ಸುಳ್ಳು ವದಂತಿಗಳನ್ನು ಹರಡದಂತೆ ಕಾರ್ಯಪಡೆಯು ನೋಡಿಕೊಳ್ಳುವುದು.

19) ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕೂಲಿ ಕಾರ್ಮಿಕರು ಸಣ್ಣ ಸಣ್ಣ ತಂಡಗಳಲ್ಲಿ ವಿಂಗಡಿಸಿ ಕೆಲಸ ನಿರ್ವಹಿಸಲು ಅವಕಾಶ ಕಲ್ಪಿಸುವುದು. ಉದ್ಯೋಗ ಸ್ಥಳದಲ್ಲಿ ನಿಯಮಿತವಾಗಿ ಸ್ವಚ್ಛತೆಯಿಂದ ಇರುವ ಬಗ್ಗೆ ತಿಳುವಳಿಕೆ ನೀಡಬೇಕು. ಕೆಲಸಕ್ಕೆ ಬರುವ ಕೆಲಸಗಾರರಲ್ಲಿ ಕೊರೊನಾ ವೈರಸ್ ಲಕ್ಷಣಗಳು ಕಂಡು ಬಂದಲ್ಲಿ ತಕ್ಷಣ ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಗಮನಕ್ಕೆ ತರುವುದು.

20) ಮಹಿಳಾ ಆರೋಗ್ಯ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು/ಆಶಾ ಕಾರ್ಯಕರ್ತೆಯರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಪ್ರತಿ ದಿನ ಗ್ರಾಮ ಮಟ್ಟದ ಕಾರ್ಯಪಡೆಯಲ್ಲಿ ತೆಗೆದುಕೊಂಡ ಕ್ರಮಗಳ ಬಗ್ಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ವರದಿಯನ್ನು ಸಲ್ಲಿಸತಕ್ಕದ್ದು.

21) ಗ್ರಾಮ ಮಟ್ಟದ ಕಾರ್ಯಪಡೆಯು ಗ್ರಾಮದಲ್ಲಿ ಪ್ರತಿ ದಿನ ಸ್ವಚ್ಛತೆಯನ್ನು ಕಾಯ್ದುಕೊಂಡು ಹೋಗಲು ನಿಗಾವಹಿಸಬೇಕು ಹಾಗೂ ಗ್ರಾಮದಲ್ಲಿ ಸ್ವಚ್ಛತಾ ಅಭಿಯಾನವನ್ನು ತೆಗೆದುಕೊಂಡು ಚರಂಡಿಗಳನ್ನು ಸ್ವಚ್ಛಗೊಳಿಸಬೇಕು ಹಾಗೂ ಕಸ ವಿಲೇವಾರಿಯನ್ನು ಸರಿಯಾಗಿ ಮಾಡಬೇಕು.

22) ಸ್ವಚ್ಚತಾಗಾರರು ಮತ್ತು ಘನ ತ್ಯಾಜ್ಯ ನಿರ್ವಹಣೆ ಮಾಡುವ ಸಿಬ್ಬಂದಿಗೆ ಮಾಸ್ಕ್, ಗ್ಲೌಸ್ ಮತ್ತು ಬೂಟ್ಸ್ (ಫುಟ್‌ವೇರ್) ಗಳನ್ನು ಒದಗಿಸುವುದು. ಸ್ವಚ್ಛತಗಾರರಿಗೆ ಕೊರೊನಾ ವೈರಸ್ ಬಗ್ಗೆ ಮುಂಜಾಗ್ರತೆಯಾಗಿ ತರಬೇತಿ ನೀಡುವುದು.

23) ಗ್ರಾಮ ಪಂಚಾಯಿತಿ ಕಛೇರಿ, ಬಸ್ ಸ್ಟ್ಯಾಂಡ್ ಮತ್ತಿತರ ಸಾರ್ವಜನಿಕ ಸ್ಥಳಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಸಾಬೂನಿನಿಂದ ಕೈತೊಳೆದುಕೊಳ್ಳಲು ಸಾಬೂನು ಹಾಗೂ ನೀರಿನ ವ್ಯವಸ್ಥೆಯನ್ನು ಕಡ್ಡಾಯವಾಗಿ ಕಲ್ಪಿಸುವುದು.



Scanned with CamScanner

24) ಈ ವ್ಯವಸ್ಥೆಯನ್ನು ಗ್ರಾಮ ಪಂಚಾಯಿತಿ ವತಿಯಿಂದ 14ನೇ ಹಣಕಾಸು ಆಯೋಗದ ಅನುದಾನ ಅಥವಾ ಸ್ವಂತ ಸಂಪನ್ಮೂಲದಿಂದ ಅವಶ್ಯ ಮಾಸ್ಕ್‌ಗಳು, ಸಾಬೂನುಗಳು ಮತ್ತು ಸ್ಯಾನಿಟೈಸರ್ ಇತ್ಯಾದಿ ಸ್ವಚ್ಛತಾ ಪರಿಕರಗಳನ್ನು ಖರೀದಿಸಿ ಗ್ರಾಮ ಮಟ್ಟದ ಕಾರ್ಯಪಡೆಗೆ ಒದಗಿಸುವುದು.

25)ಸ್ಥಳೀಯ ಸ್ವ-ಸಹಾಯ ಗುಂಪುಗಳ ಮೂಲಕ ಸ್ಥಳೀಯವಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಂದ ತಾಂತ್ರಿಕವಾಗಿ ಸಲಹೆ ಪಡೆದು ಬಟ್ಟೆಗಳಿಂದ ಮಾಸ್ಕ್‌ಗಳನ್ನು ಹಾಗೂ ಸಾಬೂನು-ಫಿನಾಯಿಲ್ ಇತರೆ ಶುಚಿತ್ವ ವಸ್ತುಗಳನ್ನು ಸ್ಥಳೀಯವಾಗಿ ಉತ್ಪಾದಿಸಲು ಕ್ರಮ ಕೈಗೊಳ್ಳುವುದು. ಇದಕ್ಕೆ ಗ್ರಾಮ ಪಂಚಾಯತಿ ವತಿಯಿಂದ ಸ್ವಸಹಾಯ ಗುಂಪುಗಳಿಗೆ ಅವಶ್ಯ ತರಬೇತಿಯನ್ನು ಕೊಡಿಸುವುದು.

ಮೇಲಿನಂತೆ ಗ್ರಾಮ ಪಂಚಾಯತಿ ಹಾಗೂ ಗ್ರಾಮ ಮಟ್ಟದ ಕಾರ್ಯಪಡೆಗಳು ಸಕ್ರಿಯವಾಗಿ ಕಾರ್ಯನಿರ್ವಹಿಸಿ ಕೋವಿಡ್-19 (ಕೊರೊನಾ ವೈರಸ್) ಸೋಂಕು ಗ್ರಾಮಾಂತರ ಪ್ರದೇಶಗಳಲ್ಲಿ ಹರಡದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಸರ್ಕಾರದ ಆಶಯವನ್ನು ಈಡೇರಿಸಲು ಶ್ರಮಿಸಬೇಕೆಂದು ಸೂಚಿಸಿದೆ.

ಗ್ರಾಮ ಪಂಚಾಯತಿ ಕಾರ್ಯಪಡೆ ಹಾಗೂ ಗ್ರಾಮ ಮಟ್ಟದ ಕಾರ್ಯಪಡೆಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಅವಶ್ಯವಾದ ನೆರವು, ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆಯನ್ನು ಮಾಡಲು ಹಾಗೂ ಜಿಲ್ಲಾಧಿಕಾರಿಗಳ ಜೊತೆ ಸಮನ್ವಯ ಮಾಡಲು ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿದೆ.

ಉಮಾ ಮಹಾದೇವನ್

(ಉಮಾ ಮಹದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾಯನಿರ್ವಾಹಕ ಅಧಿಕಾರಿಗಳು.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
3. ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು.
4. ಗ್ರಾಮ ಪಂಚಾಯಿತಿಗಳು -ಸಂಪಾದಕರು, ಕರ್ನಾಟಕ ವಿಕಾಸ – ಪ್ರಕಟಣೆಗಾಗಿ.
5. ಗಣಕಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
6. ಹೆಚ್ಚುವರಿ ಪ್ರತಿ/ ಶಾಖಾ ರಕ್ಷಕ ಕಡತ.



Scanned with CamScanner

ಮಾಹಿತಿಗಾಗಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು.
3. ಅಭಿವೃದ್ಧಿ ಆಯುಕ್ತರು ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾ.ಅ. & ಪಂ.ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ.
6. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಬೆಂಗಳೂರು.



Scanned with CamScanner